**ವಿಧಾನ ಪರಿಷತ್ತು**

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | **137 (80)** |
| ಮಾನ್ಯ ಸದಸ್ಯರ ಹೆಸರು | ಶ್ರೀ ಎಂ. ನಾಗರಾಜು (ವಿಧಾನಸಭೆಯಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | **08.12.2025** |
| ಉತ್ತರಿಸುವ ಸಚಿವರು | ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ | ಬೆಳಗಾವಿ ಜಿಲ್ಲೆಯಲ್ಲಿರುವ ನಗರ ಪ್ರಾಥಮಿಕ ಆರೋಗ್ಯ ಕೇಂದ್ರಗಳು, ಸಮುದಾಯ ಆರೋಗ್ಯ ಕೇಂದ್ರಗಳು ಮತ್ತು ಪ್ರಾಥಮಿಕ ಆರೋಗ್ಯ ಕೇಂದ್ರಗಳ ಸಂಖ್ಯೆ ಎಷ್ಟು; ಎಷ್ಟು ಕಾರ್ಯರೂಪದಲ್ಲಿವೆ; ಮತ್ತು ಎಷ್ಟು ಸ್ಥಗಿತಗೊಂಡಿವೆ; ಈ ಆರೋಗ್ಯ ಕೇಂದ್ರಗಳಲ್ಲಿ ಅಗತ್ಯಕ್ಕೆ ಅನುಗುಣವಾಗಿ ಸಿಬ್ಬಂದಿ ಮತ್ತು ವೈದ್ಯರು ಲಭ್ಯವಿದ್ದಾರೆಯೇ; ಇಲ್ಲವಾದಲ್ಲಿ ಅದಕ್ಕೆ ಕಾರಣಗಳೇನು; | ಬೆಳಗಾವಿ ಜಿಲ್ಲೆಯಲ್ಲಿರುವ ನಗರ ಪ್ರಾಥಮಿಕ ಆರೋಗ್ಯ ಕೇಂದ್ರಗಳ ಸಂಖ್ಯೆ-12, ಸಮುದಾಯ ಆರೋಗ್ಯ ಕೇಂದ್ರಗಳ ಸಂಖ್ಯೆ-16 ಮತ್ತು ಪ್ರಾಥಮಿಕ ಆರೋಗ್ಯ ಕೇಂದ್ರಗಳ ಸಂಖ್ಯೆ-139. ಎಲ್ಲ ಆರೋಗ್ಯ ಕೇಂದ್ರಗಳು ಕಾರ್ಯರೂಪದಲ್ಲಿ ಇವೆ. ಈ ಆರೋಗ್ಯ ಕೇಂದ್ರಗಳಲ್ಲಿ ಅಗತ್ಯಕ್ಕೆ ಅನುಗುಣವಾಗಿ ಸಿಬ್ಬಂದಿ ಮತ್ತು ವೈದ್ಯರು ಲಭ್ಯವಿದ್ದಾರೆ. |
| ಆ | ರಾಜ್ಯ ಸರ್ಕಾರದ ವಿವಿಧ ಯೋಜನೆಗಳಡಿ ಮಕ್ಕಳು ಮತ್ತು ಗರ್ಭಿಣಿಯರು ರೋಗ ನಿರೋಧಕ ಶಕ್ತಿಯನ್ನು ಹೆಚ್ಚಿಸಲು ಸರ್ಕಾರವು ಯಾವ ಕ್ರಮಗಳನ್ನು ಕೈಗೊಳ್ಳಲಾಗಿದೆ; | ರಾಜ್ಯದಲ್ಲಿ ಮಕ್ಕಳ ಮತ್ತು ಗರ್ಭಿಣಿಯರು ರೋಗನಿರೋಧಕ ಶಕ್ತಿಯನ್ನು ಹೆಚ್ಚಿಸಲು ಈ ಕೆಳಕಂಡ ಕ್ರಮಗಳನ್ನು ಕೈಗೊಳ್ಳಲಾಗಿದೆ.<br>• ಮಗು ಹುಟ್ಟಿದ ಕೂಡಲೇ : ಹೆಪಟೈಟಿಸ್-ಬಿ, ಓ.ಪಿ.ವಿ, ಬಿಸಿಜಿ<br>• 6ನೇ ವಾರದಲ್ಲಿ: ಓ.ಪಿ.ವಿ-1, ರೋಟಾ-1, ಐ.ಪಿ.ವಿ-1, ಪಿ.ಸಿ.ವಿ-1, ಪೆಂಟಾವೆಲೆಂಟ್-1<br>• 10 ನೇವಾರದಲ್ಲಿ : ಓ.ಪಿ.ವಿ-2, ರೋಟಾ-2, ಪೆಂಟಾವೆಲೆಂಟ್-2<br>• 14 ನೇ ವಾರದಲ್ಲಿ: ಓ.ಪಿ.ವಿ-3, ರೋಟಾ-3, ಐ.ಪಿ.ವಿ-2, ಪಿ.ಸಿ.ವಿ-2, ಪೆಂಟಾವೆಲೆಂಟ್-3<br>• 9ನೇ ತಿಂಗಳಿನಲ್ಲಿ : ದಡಾರ, ರುಬೆಲ್ಲಾ,-1, ಪಿಸಿವಿವರ್ಧಕ, ವಿಟಮಿನ್ ಎ-1<br>• 16 ರಿಂದ 23 ತಿಂಗಳು: ಓಪಿವಿವರ್ಧಕ, ದಡಾರ, ರುಬೆಲ್ಲಾ-2, ಡಿಪಿಟಿವರ್ಧಕ-1<br>• 5-6 ವರ್ಷ: ಡಿಪಿಟಿ ವರ್ಧಕ-2<br>• 10 ವರ್ಷ: ಟಿಡಿ<br>• 16 ವರ್ಷ:ಟಿಡಿ ಲಸಿಕೆಗಳನ್ನುನೀಡಲಾಗುತ್ತಿದೆ.<br>• ಗರ್ಭಿಣಿಯರಿಗೆ: ಟಿಡಿ -1 , ಟಿಡಿ-2, ಬೂಸ್ಟರ್ ವರ್ಧಕ<br>• ಗರ್ಭಿಣಿಯರಿಗೆ Iron Folic Acid, Calcium ಮಾತ್ರೆಗಳನ್ನು ನೀಡಲಾಗುತ್ತಿದೆ.<br>• ಜಿಲ್ಲೆಯ ಎಲ್ಲ ಆರೋಗ್ಯ ಸಂಸ್ಥೆಗಳಲ್ಲಿ ಮಕ್ಕಳ ಮತ್ತು ಗರ್ಭಿಣಿಯರಿಗೆ ಪೌಷ್ಠಿಕ ಆಹಾರದ ಬಗ್ಗೆ ಸಮಾಲೋಚನೆ ಮಾಡಲಾಗುತ್ತಿದೆ.<br>• ಮಕ್ಕಳು ಮತ್ತು ಗರ್ಭಿಣಿಯರಿಗೆ ರಕ್ತ ಹೀನತೆ (Anemia) ಬಗ್ಗೆ ತಪಾಸಣೆ ಮಾಡಿ ಚಿಕಿತ್ಸೆ ನೀಡಲಾಗುತ್ತಿದೆ. |
| ಇ | ಬೆಳಗಾವಿ ಜಿಲ್ಲೆಯ ಎಷ್ಟು ಸರ್ಕಾರಿ ಆಸ್ಪತ್ರೆಗಳು ಮತ್ತು | ಬೆಳಗಾವಿ ಜಿಲ್ಲೆಯ ಅಧೀನದ ಆರೋಗ್ಯ ಸಂಸ್ಥೆಗಳಲ್ಲಿ ಅಗತ್ಯ ಮತ್ತು ಅತ್ಯವಶ್ಯಕ ಔಷಧಗಳ ದಾಸ್ತಾನು ಸಮರ್ಪಕವಾಗಿರುತ್ತದೆ. ಆರೋಗ್ಯ |

| | | |
|---|---|---|
| | ಆರೋಗ್ಯ ಕೇಂದ್ರಗಳಲ್ಲಿ ಅಗತ್ಯ ಔಷಧಿಗಳು, ವೈದ್ಯಕೀಯ ಸಿಬ್ಬಂದಿಗಳ ಕೊರತೆ ಇದೆ ಮತ್ತು ಈ ಕೊರತೆಗಳಿಗೆ ಕಾರಣಗಳೇನು; | ಕೇಂದ್ರಗಳಲ್ಲಿ ಅವಶ್ಯಕ ಔಷಧಿಗಳ ದಾಸ್ತಾನು ಮುಗಿದಲ್ಲಿ ಸಂಬಂಧಿಸಿದ ಆರೋಗ್ಯ ಸಂಸ್ಥೆಗಳಲ್ಲಿ ಲಭ್ಯವಿರುವ ಅನುದಾನಗಳಲ್ಲಿ ಖರೀದಿಸಿ ರೋಗಿಗಳಿಗೆ ನೀಡಲಾಗುತ್ತಿದ್ದು, ಔಷಧಿ ಕೊರತೆಯಾಗದಂತೆ ನೋಡಿಕೊಳ್ಳಲಾಗುತ್ತದೆ. ವೈದ್ಯಕೀಯ ಸಿಬ್ಬಂದಿಯವರ ವಯೋ ನಿವೃತ್ತಿ / ವರ್ಗಾವಣೆಯಿಂದ ಸಂಸ್ಥೆಗಳಲ್ಲಿ ಖಾಲಿ ಇರುವ ಹುದ್ದೆಗಳಲ್ಲಿ ಗುತ್ತಿಗೆ / ಹೊರ ಗುತ್ತಿಗೆ ಆಧಾರದ ಮೇಲೆ ನೇಮಕಾತಿ ಮಾಡಿಕೊಂಡು ಹಾಗೂ ಜಿಲ್ಲಾಧಿಕಾರಿಗಳ ಮುಖಾಂತರ 46 ವೈದ್ಯಾಧಿಕಾರಿಗಳನ್ನು ಗುತ್ತಿಗೆ ಆಧಾರದ ಮೇಲೆ ಹಾಗೂ ಕಡ್ಡಾಯ ಸೇವೆ ಅಡಿಯಲ್ಲಿ 47 ವೈದ್ಯರನ್ನು ನಿಯುಕ್ತಿಗೊಳಿಸಿ, ಸಾರ್ವಜನಿಕರಿಗೆ ಆರೋಗ್ಯ ಸೇವೆ ನೀಡುತ್ತಿದ್ದು, ಸಿಬ್ಬಂದಿ ಕೊರತೆಯಾಗದಂತೆ ಕಾರ್ಯವ್ಯವಸ್ಥೆ ಮಾಡಲಾಗಿದೆ. |
| ಈ | ಡೆಂಗ್ಯೂ, ಮಲೇರಿಯಾ ಮತ್ತು ನೀರಿನಿಂದ ಹರಡುವ ಕಾಯಿಲೆಗಳಂತಹ ಸಾಂಕ್ರಾಮಿಕ ರೋಗಗಳನ್ನು ತಡೆಗಟ್ಟಲು ಮತ್ತು ನಿಯಂತ್ರಿಸಲು ಸರ್ಕಾರ ರೂಪಿಸಿರುವಂತಹ ಹೊಸ ಯೋಜನೆಗಳು ಯಾವುವು? (ಮಾಹಿತಿ ನೀಡುವಿರಾ) | ರಾಷ್ಟ್ರೀಯ ರೋಗವಾಹಕ ಆಶ್ರಿತ ರೋಗಗಳ ನಿಯಂತ್ರಣ ಕಾರ್ಯಕ್ರಮದ ಅನುಷ್ಠಾನ ಮಾರ್ಗಸೂಚಿಗಳ ಅನ್ವಯ, ಮಲೇರಿಯಾ, ಡೆಂಗಿ ಜ್ವರ, ಚಿಕುಂಗುನ್ಯ, ಆನೆಕಾಲು ರೋಗ ಹಾಗೂ ಮೆದುಳು ಜ್ವರದ ಮುನ್ನೆಚ್ಚರಿಕೆ ಹಾಗೂ ಮುಂಜಾಗ್ರತಾ ಕ್ರಮಗಳನ್ನು ಬೆಳಗಾವಿ ಜಿಲ್ಲೆಯೂ ಸೇರಿದಂತೆ ರಾಜ್ಯಾದ್ಯಂತ ಅನುಷ್ಠಾನಗೊಳಿಸಲಾಗುತ್ತಿದೆ. ಇದರ ಪರಿಣಾಮವಾಗಿ ರಾಜ್ಯದಲ್ಲಿ ಮಲೇರಿಯಾ ರೋಗ ಪ್ರಮಾಣವು ಗಣನೀಯವಾಗಿ ತಗ್ಗಿದ್ದು , 2027ರ ವೇಳೆಗೆ<br>ಮಲೇರಿಯಾ ನಿವಾರಣಾ ಗುರಿ ಸಾಧನೆ ಮಾಡುವ ಉದ್ದೇಶವನ್ನು ಹೊಂದಲಾಗಿದೆ. ಡೆಂಗಿ ಜ್ವರ ಪ್ರಕರಣಗಳು 2024 ರ ಸಾಲಿಗೆ ಹೋಲಿಸಿದಲ್ಲಿ 2025ರ ಪ್ರಸಕ್ತ ಸಾಲಿನಲ್ಲಿ ಶೇಕಡಾ 80 ರಷ್ಟು ಇಳಿಕೆಯಾಗಿವೆ.<br><br>ಮುಂದುವರೆದು, ಡೆಂಗಿ ಜ್ವರ ಹಾಗೂ ಮಲೇರಿಯಾ ನಿಯಂತ್ರಣಕ್ಕಾಗಿ ಈಗಾಗಲೇ ಚಾಲ್ತಿಯಲ್ಲಿರುವ ಕ್ರಮಗಳೊಂದಿಗೆ, ಈ ಕೆಳಕಂಡ ಹೊಸ ಕ್ರಮಗಳನ್ನು ಕೈಗೊಳ್ಳಲಾಗಿದೆ.<br><br>1. ಕರ್ನಾಟಕ ರಾಜ್ಯ ಸಾಂಕ್ರಾಮಿಕ ರೋಗಗಳ ಕಾಯ್ದೆ, 2020ರ ಉಪ ನಿಯಮಗಳನ್ವಯ, ಸಾರ್ವಜನಿಕ ಆರೋಗ್ಯದ ಹಿತದೃಷ್ಟಿಯಿಂದ ರಾಜ್ಯದಲ್ಲಿ ಡೆಂಗಿಜ್ವರವನ್ನು 'ಸಾಂಕ್ರಾಮಿಕ ರೋಗ'ವೆಂದು ಅಧಿಸೂಚಿಸಲಾಗಿದೆ.<br>2. ಡೆಂಗಿ ಜ್ವರ ನಿಯಂತ್ರಣಕ್ಕಾಗಿ ಪ್ರತಿ ಶುಕ್ರವಾರ : ಈಡಿಸ್ ಲಾರ್ವಾ ನಿರ್ಮೂಲನಾದಿನವೆಂದು ಪರಿಗಣಿಸಿ , ಮನೆಗಳು ಹಾಗೂ ಕಛೇರಿಗಳಲ್ಲಿ ಈಡಿಸ್ ಲಾರ್ವಾ ಉತ್ಪತ್ತಿ ಸ್ಥಳಗಳನ್ನು ನಿರ್ಮೂಲನೆ ಮಾಡಲಾಗುತ್ತಿದೆ.<br>3. ರೋಗವಾಹಕಗಳ ಸರ್ವೇಕ್ಷಣೆ ಹಾಗೂ ನಿಯಂತ್ರಣ ಕ್ರಮಗಳ ಮೇಲ್ವಿಚಾರಣೆಗಾಗಿ ಎಲ್ಲಾ ಜಿಲ್ಲೆಗಳಲ್ಲಿ ಕೀಟಶಾಸ್ತ್ರಜ್ಞರು ಹಾಗೂ ಕೀಟ ಸಂಗ್ರಹಕಾರರು ಲಭ್ಯವಿದ್ದಾರೆ.<br>4. ಮಲೇರಿಯಾ ಹಾಗೂ ಡೆಂಗಿ ಜ್ವರದ ಸಾಧ್ಯತೆಯನ್ನು ಪೂರ್ವಭಾವಿಯಾಗಿ ತಿಳಿದುಕೊಳ್ಳಲು Molecular Xenomonitoring ಅನ್ನು ನಡೆಸಲಾಗುತ್ತಿದೆ.<br>5. ಈಡಿಸ್ ಲಾರ್ವಾ ಉತ್ಪತ್ತಿ ತಾಣಗಳ ಸಮೀಕ್ಷೆ ಹಾಗೂ ನಾಶ ಚಟುವಟಿಕೆಯ Real time data capturing ಗಾಗಿ 22 ಜಿಲ್ಲೆಗಳಲ್ಲಿ PRISM-H applicationಅನ್ನು ಪ್ರಾಯೋಗಿಕವಾಗಿ ನಡೆಸಲಾಗುತ್ತಿದೆ. ಇದರಿಂದ, ಸದರಿ ಚಟುವಟಿಕೆಯ ಗುಣಾತ್ಮಕತೆಯನ್ನು ಖಚಿತಪಡಿಸಿಕೊಳ್ಳಬಹುದಾಗಿದೆ.<br>6. ಡೆಂಗಿ ಜ್ವರ ನಿಯಂತ್ರಣಕ್ಕಾಗಿ ರಾಜ್ಯಾದ್ಯಂತ ಒಟ್ಟು 1200 ಸ್ವಯಂಸೇವಕರ ಸೇವೆಯು 100 ದಿನಗಳ ಅವಧಿಗೆ ಲಭ್ಯವಿದ್ದು, ಬೆಳಗಾವಿ ಜಿಲ್ಲೆಯಲ್ಲಿ 40 ಸ್ವಯಂ ಸೇವಕರು ದೈನಂದಿನ ಗೌರವಧನದ (@ Rs 400/- per day) ಆಧಾರದಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದಾರೆ.<br>7. ಡೆಂಗಿ ಜ್ವರ ಪ್ರಕರಣಗಳ ರಕ್ತದ ಮಾದರಿಗಳ ಪರೀಕ್ಷೆಗಾಗಿ ಜಿಲ್ಲಾವಾರು ಗುರಿ ನಿಗದಿಪಡಿಸಲಾಗಿದೆ.<br>8. ಡೆಂಗಿ ಜ್ವರ ನಿಯಂತ್ರಣದ ಸಂಬಂಧ, Standard Operating |

| | | |
|---|---|---|
| | | Procedure ಅನ್ನು ಹೊರಡಿಸಲಾಗಿದ್ದು, ಅದರಂತೆ ಕ್ರಮಗಳನ್ನು ಕೈಗೊಳ್ಳಲಾಗಿದೆ.<br>9. ಡೆಂಗಿ ಜ್ವರ ಹರಡುವ ಈಡಿಸ್ ಸೊಳ್ಳೆಗಳ ನಿಯಂತ್ರಣ ಕ್ರಮಗಳನ್ನು ಪಾಲಿಸದವರಿಗೆ ನಿರ್ದಿಷ್ಟ ಮೊತ್ತದ ದಂಡವನ್ನು ವಿಧಿಸಲು ಅವಕಾಶವನ್ನುಕಲ್ಪಿಸಲಾಗಿದೆ.<br>10.ಮಲೇರಿಯಾ ನಿವಾರಣಾ ಗುರಿ ಸಾಧನೆಗೆ ಅನುಕೂಲವಾಗುವಂತೆ, ಹೊರ ರಾಜ್ಯಗಳಿಂದ ಬರುವ ವಲಸೆ ಕಾರ್ಮಿಕರಿಗೆ ತಪಾಸಣೆ ಮಾಡಿ, ಮಲೇರಿಯಾ ಖಚಿತಪಟ್ಟಲ್ಲಿ ತೀವ್ರ ಚಿಕಿತ್ಸೆ ಹಾಗೂ ಇತರ ಮುಂಜಾಗ್ರತಾ ಕ್ರಮಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ.<br><br>ನೀರಿನಿಂದ ಹರಡುವ ಸಾಂಕ್ರಾಮಿಕ ರೋಗಗಳಾದ ಕಾಲರಾ, ಕರುಳುಬೇನೆ, ವಾಂತಿಬೇಧಿ, ಅತಿಸಾರಬೇಧಿ, ಕಾಮಾಲೆ ಹಾಗೂ ಇಲಿ ಜ್ವರ ಮುಂತಾದ ಸಾಂಕ್ರಾಮಿಕ ರೋಗಗಳನ್ನು ತಡೆಗಟ್ಟಲು ಮತ್ತು ನಿಯಂತ್ರಿಸಲು ಸರ್ಕಾರ ಕೈಗೊಂಡಿಸರುವ ಮುಂಜಾಗ್ರತಾ ಕ್ರಮಗಳು ಹಾಗೂ ನಿಯಂತ್ರಣ ಕಾರ್ಯಕ್ರಮಗಳನ್ನು ಇಲಾಖೆಯಿಂದ ನಡೆಸಲಾಗುತ್ತಿದೆ. ವಿವರಗಳನ್ನು ಅನುಬಂಧ -1 ನೀಡಲಾಗಿದೆ. |

**ಆಕುಕ 172 ಎಸ್‌ಎಂಎಂ 2025**

**(ದಿನೇಶ್ ಗುಂಡೂರಾವ್)**
**ಆರೋಗ್ಯ ಮತ್ತು ಕುಟುಂಬ ಕಲ್ಯಾಣ**
**ಸಚಿವ**

ಅನುಬಂಧ-1

*ನೀರಿನಿಂದ ಹರಡುವ ಸಾಂಕ್ರಾಮಿಕ ರೋಗಗಳಾದ ಕಾಲರಾ, ಕರುಳುಬೇನೆ, ವಾಂತಿ ಬೇಧಿ, ಅತಿಸಾರ ಬೇಧಿ, ಕಾಮಾಲೆ ಹಾಗೂ ಇಲಿಜ್ವರ ಮುಂತಾದ ರೋಗಗಳು ಹೆಚ್ಚಾಗಿ ಹರಡುವ ಸಾಧ್ಯತೆ ಇದ್ದು, ಸಾಂಕ್ರಾಮಿಕ ರೋಗಗಳು ಸಂಭವಿಸದಂತೆ ಈ ಕೆಳಕಂಡ ಮುಂಜಾಗ್ರತಾ ಮತ್ತು ನಿಯಂತ್ರಣ ಕ್ರಮಗಳನ್ನು ನಿರ್ವಹಿಸಲಾಗುತ್ತಿದೆ*

***

1. ಜಾತ್ರೆ, ರಥೋತ್ಸವ, ದರ್ಗಾಗಳಲ್ಲಿನ ಉರುಸುಗಳು ಮತ್ತು ಊರು ಹಬ್ಬಗಳ ಆಚರಣೆ ಮಾಡುವ ಸಂದರ್ಭಗಳಲ್ಲಿ ಸಾಂಕ್ರಾಮಿಕ ರೋಗಗಳು ಹರಡುವ ಸಂಭವಿಸುವ ಸಾಧ್ಯತೆಗಳಿದ್ದು, ಅವುಗಳನ್ನು ತಡೆಗಟ್ಟಲು ಮತ್ತು ನಿಯಂತ್ರಿಸಲು ಆರೋಗ್ಯ ಇಲಾಖೆಯಲ್ಲಿ ಲಭ್ಯವಿರುವ ಎಲ್ಲಾ ಸವಲತ್ತುಗಳ ಬಗ್ಗೆ ಜಿಲ್ಲೆ/ತಾಲ್ಲೂಕು/ಪ್ರಾ.ಆ.ಕೇಂದ್ರ ಮಟ್ಟದಲ್ಲಿ ನಡೆಯುವ ಅಂತರ ಇಲಾಖಾ ಸಭೆಗಳು/ ಜನಪ್ರತಿನಿಧಿಗಳ ಸಭೆಗಳು/ ಸಮುದಾಯದ ಮುಖ್ಯಸ್ಥರ ಸಭೆಗಳು/ಆರೋಗ್ಯ ಶಿಕ್ಷಣ ಸಭೆಗಳು ಮುಂತಾದ ಸಭೆಗಳಲ್ಲಿ ತಮ್ಮ ತಮ್ಮ ವ್ಯಾಪ್ತಿಗೆ ಸಂಬಂಧ ಪಟ್ಟ ಮುಂಜಾಗ್ರತಾ ಕ್ರಮವಹಿಸುವಂತೆ ಮಾಹಿತಿ ನೀಡುವುದು ಮತ್ತು ಈ ಬಗ್ಗೆ ಉತ್ಸವ ನಡೆಯುತ್ತಿರುವ ಸ್ಥಳಗಳಲ್ಲಿ ಪ್ರಕಟಣೆ ಮತ್ತು ಘೋಷಣೆ ಮಾಡಲಾಗುತ್ತಿದೆ.

2. ಜಾತ್ರೆ, ರಥೋತ್ಸವ, ದರ್ಗಾಗಳಲ್ಲಿ ಉರುಸುಗಳು ಮತ್ತು ಊರು ಹಬ್ಬಗಳ ಆಚರಣೆ ಸಂದರ್ಭದಲ್ಲಿ ಉಂಟಾಗುವ ಸಾಂಕ್ರಾಮಿಕ ರೋಗಗಳ ಸ್ಫೋಟಗಳಲ್ಲಿ (Out breaks) ) ಕ್ಷಿಪ್ರ ಪ್ರತಿಕ್ರಿಯಾ ತಂಡವನ್ನು (Rapid Response Team) ತಕ್ಷಣ ಕಾಯಿಲೆ ಪೀಡಿತ ಸ್ಥಳಕ್ಕೆ ಕಳುಹಿಸಿ, ಗ್ರಾಮದಲ್ಲಿಯೇ ಒಂದು ತಾತ್ಕಾಲಿಕ " ಚಿಕಿತ್ಸಾ ಕೇಂದ್ರ " ಮತ್ತು " ಪರಿಹಾರ ಕೇಂದ್ರ " ವನ್ನು ತೆರೆದು, ಸೋಂಕು ಸಂಪೂರ್ಣವಾಗಿ ನಿಯಂತ್ರಣಕ್ಕೆ ಬರುವವರೆಗೂ, ದಿನದ 24 ಗಂಟೆಯೂ ನಿಗಾವಣೆ ಮತ್ತು ವೈದ್ಯಕೀಯ ಸೇವಾ ಸೌಲಭ್ಯಗಳನ್ನು ನೀಡುವಂತೆ ಕ್ರಮವಹಿಸಲಾಗಿದೆ.

3. ಸಾರ್ವಜನಿಕರಿಗೆ ಸುರಕ್ಷಿತ ಕುಡಿಯುವ ನೀರನ್ನು ಒದಗಿಸುವುದು ಹಾಗೂ ಕುಡಿಯುವ ನೀರಿನ ಮೂಲಗಳನ್ನು ನಿಯಮಿತವಾಗಿ ಪರೀಕ್ಷೆಗೊಳಪಡಿಸಿ ಕುಡಿಯಲು ಯೋಗ್ಯವಿರುವುದನ್ನು ಖಾತರಿ ಪಡಿಸಿಕೊಳ್ಳುವುದು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆಯ ಜವಾಬ್ದಾರಿಯಾಗಿರುತ್ತದೆ. ಮಹಾಮಾರಿ /Out Break ಸಂದರ್ಭಗಳಲ್ಲಿ ಕುಡಿಯುವ ನೀರಿನ ಮೂಲಗಳನ್ನು ಪರೀಕ್ಷಿಸುವುದು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಜವಾಬ್ದಾರಿಯಾಗಿರುತ್ತದೆ.

4. ವೈಯಕ್ತಿಕ ಸ್ವಚ್ಛತೆ, ಶುದ್ಧ ಕುಡಿಯುವ ನೀರಿನ ಹಾಗೂ ಆಹಾರದ ಸಂರಕ್ಷಣೆ, ಪರಿಸರ ನೈರ್ಮಲ್ಯದ ನಿರ್ವಹಣೆ ಬಗ್ಗೆ ತಿಳಿಸುವುದು. ರಸ್ತೆ/ಬೀದಿ ಬದಿಗಳಲ್ಲಿ ಕತ್ತರಿಸಿದ ಹಣ್ಣು, ಮತ್ತು ತೆರೆದಿಟ್ಟ ಆಹಾರ ಪದಾರ್ಥಗಳನ್ನು ಮಾರಾಟ ಮಾಡದಂತೆ ಹಾಗೂ ಸೇವಿಸಬಾರದೆಂದು ಸಾರ್ವಜನಿಕರಿಗೆ ಆರೋಗ್ಯ ಶಿಕ್ಷಣ ನೀಡಲು ಎಲ್ಲಾ ಆರೋಗ್ಯ ಸಿಬ್ಬಂದಿಯವರಿಗೆ ಜವಾಬ್ದಾರಿ ವಹಿಸಲಾಗಿದೆ.

5. ನಿರ್ಧಿಷ್ಟವಾದ ರೋಗ ನಿಯಂತ್ರಣ ಕ್ರಮಗಳನ್ನು ಜಾರಿಗೊಳಿಸಿ, ಸಾರ್ವಜನಿಕರು ಅನಾರೋಗ್ಯಕ್ಕೆ ತುತ್ತಾಗದಂತೆ ಹಾಗೂ ಸಾವು ನೋವುಗಳು ಸಂಭವಿಸದಂತೆ ಕ್ರಮವಹಿಸುವುದು

6. ಸ್ಥಳೀಯ ಆಹಾರ ಸುರಕ್ಷತಾ ಅಧಿಕಾರಿಗಳು, ಹೋಟೆಲ್ ಮತ್ತು ಅಂಗಡಿಗಳ ತಪಾಸಣೆ ನಡೆಸಿ, ಆಹಾರ ಮತ್ತು ನೀರಿನ ಗುಣಮಟ್ಟದ ಸುರಕ್ಷತೆ ಬಗ್ಗೆ ಗಮನ ಹರಿಸುವುದು. ತುರ್ತು ಸಂದರ್ಭಗಳಲ್ಲಿ ಬಿಸಿ ನೀರು ಸರಬರಾಜು ಮಾಡಲು ಹೋಟೆಲ್ ಮಾಲೀಕರಿಗೆ ಕಟ್ಟು ನಿಟ್ಟಿನ ಸೂಚನೆ ನೀಡಲಾಗಿದೆ.

7. ತುರ್ತು ಸಂದರ್ಭಗಳಲ್ಲಿ ಜಿಲ್ಲಾಧಿಕಾರಿಗಳು ಹಾಗೂ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು ಜಿಲ್ಲಾ ಪಂಚಾಯತ್ ಇವರುಗಳೊಂದಿಗೆ ಚರ್ಚಿಸಿ, ಅಂತರ ಇಲಾಖಾ ಅಧಿಕಾರಿಗಳ ಸಭೆ ಕರೆದು ಪೂರ್ವ ಸಿದ್ಧತೆಗಳ ಬಗ್ಗೆ ಚರ್ಚಿಸಿ ಕ್ರಮವಹಿಸುವುದು.

8. ಗ್ರಾಮ ಪಂಚಾಯತಿಗಳಿಗೆ ಮತ್ತು ಗ್ರಾಮ ಆರೋಗ್ಯ ಮತ್ತು ನೈರ್ಮಲ್ಯ ಸಮಿತಿಗಳಿಗೆ ಈ ಕೆಳಗಿನಂತೆ ಸೂಚನೆ ನೀಡಲಾಗಿದೆ.

- ಶುದ್ಧ ಕುಡಿಯುವ ನೀರು ಹಾಗೂ ಸಮರ್ಪಕ ನೈರ್ಮಲ್ಯ ನಿರ್ವಹಣೆಯಲ್ಲಿ ಅಗತ್ಯವಿರುವ ದುರಸ್ಥಿ ಕಾರ್ಯಗಳನ್ನು ಪೂರ್ವ ಭಾವಿಯಾಗಿ ಗುರುತಿಸಿ, ಸರಿಪಡಿಸುವುದು.
- ನೀರು ಸಂಗ್ರಹಿಸುವ ಟ್ಯಾಂಕ್‌ಗಳನ್ನು ಬ್ಲೀಚಿಂಗ್ ಪುಡಿಯಿಂದ ಸ್ವಚ್ಛಗೊಳಿಸಿ ನೀರು ಶೇಖರಿಸುವುದು.
- ಕುಡಿಯುವ ನೀರು ಕಲುಷಿತವಾಗದಂತೆ ಪೂರೈಕೆ ವ್ಯವಸ್ಥೆಯಲ್ಲಿ ಸೋರುವಿಕೆಗಳನ್ನು ಗುರ್ತಿಸಿ, ತಕ್ಷಣವೇ ದುರಸ್ಥಿಗೊಳಿಸುವುದು.
- ಶುದ್ದೀಕರಿಸಿದ ನೀರನ್ನು ಟ್ಯಾಂಕರ್‌ಗಳ ಮೂಲಕ ಪೂರೈಸುವುದು ಹಾಗೂ ಗ್ರಾಮದಲ್ಲಿ ನೈರ್ಮಲ್ಯವನ್ನು ಸಮರ್ಪಕವಾಗಿ ನಿರ್ವಹಿಸಲು ಪಂಚಾಯತ್ ಅಭಿವೃದ್ಧಿ ಅಧಿಕಾರಿ (PDO) ಗಳ ಜೊತೆ ಸಮನ್ವಯ ಸಾದಿಸುವುದು.

9. ಸೂಕ್ತ ಚಿಕಿತ್ಸೆಗಾಗಿ ಅಗತ್ಯವಾದ ಜೀವರಕ್ಷಕ ಔಷಧಿಗಳು ಹಾಗೂ ಕ್ರಿಮಿ-ಕೀಟನಾಶಕಗಳನ್ನು ಎಲ್ಲಾ ಪ್ರಾಥಮಿಕ ಆರೋಗ್ಯ ಕೇಂದ್ರ ಹಾಗೂ ತಾಲ್ಲೂಕು ಆಸ್ಪತ್ರೆಗಳಲ್ಲಿ ಲಭ್ಯವಿರುವಂತೆ ಕ್ರಮ ಕೈಗೊಳ್ಳುವುದು. ಹೆಚ್ಚಿನ ಅವಶ್ಯಕತೆಯಿದ್ದಲ್ಲಿ ಔಷಧಗಳನ್ನು ಕರ್ನಾಟಕ ರಾಜ್ಯವೈದ್ಯಕೀಯ ಸರಬರಾಜು ನಿಗಮ ನಿಯಮಿತ (**KSMSCL**) ಇವರಿಂದ ಪಡೆಯುವುದು ಹಾಗೂ ಹೆಚ್ಚಿನ ಅಗತ್ಯತೆ ಕಂಡುಬಂದಲ್ಲಿ **NFDS & ARS** ನಿಧಿಯಿಂದ ಖರೀದಿಸಲು ಕ್ರಮ ಕೈಗೊಳ್ಳಲಾಗಿದೆ.

10. ಸಮುದಾಯ ಆರೋಗ್ಯ ಅಧಿಕಾರಿಗಳು, ಹಿರಿಯ ಮತ್ತು ಕಿರಿಯ ಆರೋಗ್ಯ ನಿರೀಕ್ಷಣಾಧಿಕಾರಿಗಳು, ಪ್ರಾಥಮಿಕ ಆರೋಗ್ಯ ಸುರಕ್ಷಾಧಿಕಾರಿಗಳು, ಅಂಗನವಾಡಿ ಕಾರ್ಯಕರ್ತೆಯರು ಹಾಗೂ ಆಶಾ ಕಾರ್ಯಕರ್ತೆಯರಲ್ಲಿ ಓ.ಆರ್.ಎಸ್ ಲಭ್ಯವಿದ್ದು, ಮನೆ ಮನೆ ಭೇಟಿ ಸಂದರ್ಭದಲ್ಲಿ ವಿತರಿಸುವುದು.

**ಕರಳುಬೇನೆ/ಕಾಲರಾ/ಜಾಂಡೀಸ್‌ಇತ್ಯಾದಿ ಸಾಂಕ್ರಾಮಿಕಗಳ ಸ್ಫೋಟಕಗಳು (Out Breaks) ಸಂಭವಿಸಿದ್ದಲ್ಲಿ ತುರ್ತಾಗಿ ಕೈಗೊಳ್ಳಬೇಕಾದ ನಿಯಂತ್ರಣ ಕ್ರಮಗಳು**

1. ಸಮಸ್ಯಾತ್ಮಕ ಸ್ಥಳಗಳಿಗೆ ಕ್ಷಿಪ್ರ ಪ್ರತಿಕ್ರಿಯಾ ತಂಡ (Rapid Response Team ) ವನ್ನು ಪೀಡಿತ ಸ್ಥಳಕ್ಕೆ ಕಳುಹಿಸಿ, ಅಗತ್ಯ ಔಷಧಿಗಳೊಂದಿಗೆ ಗ್ರಾಮದಲ್ಲಿಯೇ ಒಂದು ತಾತ್ಕಾಲಿಕ ಚಿಕಿತ್ಸಾ ಶಿಬಿರವನ್ನು ತೆರೆದು, ರೋಗವು ಸಂಪೂರ್ಣವಾಗಿ ನಿಯಂತ್ರಣಕ್ಕೆ ಬರುವವರೆಗೂ, ದಿನದ 24 ಗಂಟೆಯೂ ನಿಗಾವಣೆ ಮತ್ತು ವೈದ್ಯಕೀಯ ಸೇವಾ ಸೌಲಭ್ಯಗಳನ್ನು ನೀಡುವುದು
2. ತಾತ್ಕಾಲಿಕವಾಗಿ ನಿರ್ಮಿಸಿರುವ ಶೌಚಾಲಾಯಗಳನ್ನು ಕಡ್ಡಾಯವಾಗಿ ಉಪಯೋಗಿಸಲು ಆರೋಗ್ಯ ಶಿಕ್ಷಣ ನೀಡುವುದು. ಸಾಂಕ್ರಾಮಿಕ ರೋಗಗಳು ಹರಡದಂತೆ, ಪೀಡಿತ ಪ್ರದೇಶದಲ್ಲಿ ಸಕ್ರಿಯರೋಗ ಸಮೀಕ್ಷೆ (*Active Disease Surveillance*) ಕಾರ್ಯವನ್ನು ರೋಗವು ಸಂಪೂರ್ಣವಾಗಿ ಹತೋಟಿಗೆ ಬರುವವರೆಗೂ ಪರಿಣಾಮಕಾರಿಯಾಗಿ ನಡೆಸುವುದು.
3. ವೈಯುಕ್ತಿಕ ಸ್ವಚ್ಛತೆ, ಕೈತೊಳೆಯುವುದು, ಕಾಯಿಸಿ ಆರಿಸಿದ ನೀರನ್ನು ಕುಡಿಯುವುದು, ಮನೆಯ ಸುತ್ತ ಮುತ್ತಲು ಶುಚಿತ್ವವನ್ನು ಕಾಪಾಡಿಕೊಳ್ಳುವುದು ಹಾಗೂ ಇತರೆ ರೋಗ ನಿಯಂತ್ರಣದ ಕುರಿತು ಸಾರ್ವಜನಿಕರಿಗೆ ಆರೋಗ್ಯ ಶಿಕ್ಷಣ ಮಾಹಿತಿ ಮತ್ತು ಸಂವಹನ ನೀಡುವುದು.
4. ಔಟ್‌ಬ್ರೇಕ್ ಸಂದರ್ಭದಲ್ಲಿ ಜಿಲ್ಲಾ ಸರ್ವೇಕ್ಷಣ ಘಟಕ ಕುಡಿಯುವ ನೀರಿನ ಮೂಲಗಳಲ್ಲಿ Coliform ಗಳ ಪತ್ತೆ ಹಚ್ಚುವಿಕೆಗಾಗಿ H2S ವಿಧಾನ ಮತ್ತು ಎಂ.ಪಿ.ಎನ್ (*Most Probable number)* ಪರೀಕ್ಷೆಗಳನ್ನು ನಡೆಸುವುದು ಹಾಗೂ ಪ್ಯಾಥೋಜನ್ ಗಳ ಪತ್ತೆ ಹಚ್ಚುವಿಕೆಗಾಗಿ 10-15 % ಶಂಕಿತ ಪ್ರಕರಣಗಳಿಂದ (Stool Culture and sensitivity) ಪರೀಕ್ಷೆಯನ್ನು ಮಾಡುವುದು.
5. ಔಟ್‌ಬ್ರೇಕ್ ಸಂದರ್ಭದಲ್ಲಿ ಕುಡಿಯುವ ನೀರಿನ ಕ್ಲೋರಿನೇಷನ್ ಮಟ್ಟವನ್ನು ಕ್ರಾಸ್ ಚೆಕ್ ಮಾಡುವುದು.

6. ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಅಧಿಕಾರಿಗಳೊಂದಿಗೆ ಸಭೆಗಳನ್ನು ನಡೆಸಿ ಕುಡಿಯುವ ನೀರಿನ ಪರೀಕ್ಷೆಗಳು ನಿಯಮಿತವಾಗಿ ನಡೆಸುತ್ತಿರುವ ಬಗ್ಗೆ ಖಚಿತ ಪಡಿಸಿಕೊಳ್ಳುವುದು.
7. ನೀರಿನಿಂದ ಹರಡುವ ರೋಗ ಪ್ರಕರಣಗಳು ಸಾಮಾನ್ಯಕಿಂತ ಹೆಚ್ಚು ವರದಿಯಾದಲ್ಲಿ IHIP "ಇವೆಂಟ್ ಅಲರ್ಟ್" ಅನ್ನು ಜನರೇಟ್ ಮಾಡಿ ಔಟ್ ಬ್ರೇಕ್ ನಿರ್ವಹಣೆಯ ಶಿಷ್ಟಾಚಾರದ ಅನುಸಾರ ಕ್ರಮವಹಿಸುವುದು.
8. ಗಂಭೀರ ಸ್ವರೂಪದ ರೋಗಿಗಳನ್ನು ಅಂಬುಲೆನ್ಸ್ ಮೂಲಕ ಹತ್ತಿರದ ತಾಲ್ಲೂಕು/ಜಿಲ್ಲಾ ಆಸ್ಪತ್ರೆಗೆ ಹೆಚ್ಚಿನ ಚಿಕಿತ್ಸೆಗಾಗಿ ಸಾಗಿಸುವ ವ್ಯವಸ್ಥೆ ಕಲ್ಪಿಸುವುದು.
9. ಯಾವುದೇ ತುರ್ತು ಪರಿಸ್ಥಿತಿಯನ್ನು ನಿಭಾಯಿಸಲು ಅಂತರ ಇಲಾಖೆಯ ಸಮನ್ವಯದೊಂದಿಗೆ ಸರ್ವ ಸನ್ನದ್ಧವಾಗಿರುವುದು
10. ರೋಗ ನಿಯಂತ್ರಣಕ್ಕಾಗಿ 24/7 ತಾತ್ಕಾಲಿಕ ಚಿಕಿತ್ಸಾಲಯಗಳನ್ನು ಸ್ಥಾಪನೆ, ತುರ್ತು ಔಷಧಿಗಳ ದಾಸ್ತಾನುಗಳನ್ನು ಖಚಿತ ಪಡಿಸಿಕೊಳ್ಳುವುದು, ಮನೆ-ಮನೆಗೆ ಭೇಟಿ ನೀಡಿ ಸಕ್ರಿಯ ಸರ್ವೇಕ್ಷಣೆಯನ್ನು ಬಲಪಡಿಸುವುದು, ಸಮೂಹ ಮಾಧ್ಯಮ ಹಾಗೂ ವಿದ್ಯುನ್ಮಾನ ಮಾಧ್ಯಮಗಳ ಮುಖೇನ ಸಾರ್ವಜನಿಕರಿಗೆ ಅರೋಗ್ಯ ಶಿಕ್ಷಣ, ಮಾಹಿತಿ ಮತ್ತು ಸಂವಹನ ನೀಡುವುದು.
11. ಸಾಂಕ್ರಾಮಿಕ ರೋಗಗಳ ಸ್ಪೋಟಗಳು (Out Breaks) ಸಂಭವಿಸಿದ ಸಂದರ್ಭದಲ್ಲಿ ಸ್ಥಳೀಯ ಮತ್ತು ರಾಜ್ಯ ಮಟ್ಟದ ಸುದ್ದಿ ಮಾಧ್ಯಮಗಳಲ್ಲಿ ಕಲ್ಪಿತ ವರದಿಗಳು ಪ್ರಕಟವಾಗಿ ಸಮುದಾಯದಲ್ಲಿ ಭೀತಿಗೆ ಕಾರಣವಾಗದಂತೆ ನೈಜ ವರದಿಗಳನ್ನು ಪ್ರಕಟಿಸಲು ಹಾಗೂ ಸಾರ್ವಜನಿಕರಲ್ಲಿ ಆರೋಗ್ಯದ ಅರಿವು ಉಂಟುಮಾಡುವಂತಹ ಸುದ್ದಿಗಳಿಗೆ ಆದ್ಯತೆ ನೀಡುವಂತೆ ಮಾಧ್ಯಮದವರಲ್ಲಿ ಕೋರುವುದು.

*ಈ ಮೇಲಿನ ಎಲ್ಲಾ ಕ್ರಮಗಳನ್ನು ಕೈಗೊಂಡು ನೀರಿನಿಂದ ಹರಡುವ ಸಾಂಕ್ರಾಮಿಕ ರೋಗಗಳ ಸ್ಪೋಟಗಳನ್ನು (Out Beaks) ಪರಿಣಾಮಕಾರಿಯಾಗಿ ಎದುರಿಸಲು ಇಲಾಖೆಯು ಸಿದ್ಧವಾಗಿದೆ.*

ಯೋಜನಾ ನಿರ್ದೇಶಕರು (IDSP))
ಆರೋಗ್ಯ ಮತ್ತು ಕು ಕ ಸೇವೆಗಳು